ಫಿಶ್ ತಿನ್ನೋದು ಕಲಿತಿದ್ದೀನಿ. ಮೀನು ಅವಶ್ಯಕವಾಗಿ ತಿನ್ನಲೇಬೇಕೆಂದು ಡಾಕ್ಟರ್ ಹೇಳಿರುವುದರಿಂದ ರೂಢಿ ಮಾಡಿಕೊಂಡೆ. ಅಂಜಲ್ ಮತ್ತು ಕಾಣೆ ಮೀನು ಮಾತ್ರ ತಿಂತೀನಿ' ಎಂದು ಮಾತು ನಿಲ್ಲಿಸಿದ್ದ. ಅವನಿಗೆ ಗೊತ್ತಿರದ ಕೆಲವು ಸಂಗತಿಗಳ ಬಗ್ಗೆ ನಾನೂ ಮಾತನಾಡುವುದಿತ್ತು, ರಾತ್ರಿಗೆ ಮಾತನಾಡೋಣವೆಂದು ಸುಮ್ಮನಾದೆ.

ಅಘನಾಶಿನಿ ನದಿ ಅರಬ್ಬಿ ಸಮುದ್ರವನ್ನು ಸೇರುವ ಜಾಗದ ಹೆಸರೇ ಅಘನಾಶಿನಿ. ಅದು ಊರಿನ ಹೆಸರೂ ಕೂಡಾ. ಕಣ್ಣು ಹಾಯಿಸಿದಷ್ಟೂ ಹಸಿರು ಮತ್ತು ನೀರು. ಜಿ.ವಿ. ಹೆಗಡೆ ಬದುಕಲು ಅತ್ಯಂತ ಯೋಗ್ಯವಾದ ಪರಿಸರವನ್ನೇ ಆಯ್ಕೆ ಮಾಡಿಕೊಂಡಿದ್ದಾನೆ. ಅಘನಾಶಿನಿಯಿಂದ ಆ ಕಡೆ ಇರುವ ತದಡಿಗೆ ಮೋಟಾರ್ ಬೋಟಿನಲ್ಲಿ ಹೋಗಿದ್ದೆವು. ದಾರಿಯಲ್ಲಿ, ಬೋಟ್ನಲ್ಲಿ ಜನ 'ವಕೀಲರಿಗೆ ನಮಸ್ಕಾರ, ನಾರಾಯಣ ಹೆಗಡೆಯವರಿಗೆ ನಮಸ್ಕಾರ, ತಂದೆಯವರು ಸೌಖ್ಯವಾ...'ಮುಂತಾಗಿ ವಿಚಾರಿಸುತ್ತಿದ್ದರು. ತದಡಿಯಲ್ಲಿ ನೂರಾರು ಯಂತ್ರಚಾಲಿತ ಮೀನು ಹಿಡಿಯುವ ದೋಣಿಗಳು ನಿಂತಿದ್ದವು. ಮೀನು ಹಿಡಿಯಲು ಹೋಗಿದ್ದ ಹತ್ತಾರು ದೋಣಿಗಳು ವಿವಿಧ ಬಗೆಯ ಮೀನುಗಳ ರಾಶಿಗಳನ್ನೊತ್ತು ಬಂದಿದ್ದವು. ಜನವೋ ಜನ, ಗದ್ದಲವೋ ಗದ್ದಲ. ಮೀನುಗಳಿಗೆ ಐಸ್ ಬೆರೆಸಿ ಕಂಟೈನರ್ ಗಳಿಗೆ ತುಂಬುತ್ತಿದ್ದರು. 'ನಮ್ಮ ಏರಿಯಾದಲ್ಲಿ ಇದು ದೊಡ್ಡ ಫಿಶ್ಶಿಂಗ್ ಸೆಂಟರ್. ಒಳ್ಳೆಯ ಮೀನನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ. ಕೋಟ್ಯಂತರ ರೂಪಾಯಿ ಟರ್ನ್ ಓವರ್ ಆಗ್ತದೆ. ಮೀನುಗಾರಿಕೆ ಒಂದು ವಿಚಿತ್ರ ಉದ್ಯಮ. ಮೀನುಗಾರರು ಪ್ರಮುಖವಾಗಿ ರಟ್ಟೆಯ ಬಲವನ್ನೇ ನಂಬಿ ಬದುಕುವುದು. ಸಮುದ್ರವೇ ಇವರ ಆಸ್ತಿ. ಉಳುವಂತಿಲ್ಲ, ಬಿತ್ತನೆ ಮಾಡುವಂತಿಲ್ಲ, ಬೆಳೆಗೆ ಕಾವಲು ಕಾಯುವಂತಿಲ್ಲ, ಔಷಧಿ ಸಿಂಪಡಿಸುವಂತಿಲ್ಲ. ಯಾರ ಹೆಸರಲ್ಲೂ ಸಮುದ್ರದ ದಾಖಲೆಗಳಿಲ್ಲ! ತೋಳ್ಬಲ ಇರುವವನು ಎಷ್ಟು ಬೇಕಾದರೂ ಸಂಪಾದಿಸಬಹುದು. ಆದರೂ ವ್ಯಾಪಾರಿಗಳು ಮೋಸ ಮಾಡುವುದನ್ನು ತಡೆಯಲು ಸಾಧ್ಯವಿಲ್ಲ. ಭಾರತದಲ್ಲಿ ಜಾತಿ ವ್ಯವಸ್ಥೆಯಿಂದಾಗಿ ಕಾರ್ಲ್ ಮಾರ್ಕ್ಸ್ ಗಿಂತಲೂ ಗಾಂಧಿಯವರೇ ಪ್ರಸ್ತುತ ಅನ್ನಿಸುತ್ತಾರೆ. ರಷ್ಯಾ ಮತ್ತು ಚೀನಾ ದೇಶಗಳು ಕಾರ್ಲ್ ಮಾರ್ಕ್ಸ್ ನನ್ನು ಮತ್ತವನ ಸಿದ್ಧಾಂತಗಳನ್ನು ಚಿಂದಿ ಚಿಂದಿ ಮಾಡಿಬಿಟ್ಟವು. ಯಾವುದೇ ಧರ್ಮ, ಸಿದ್ಧಾಂತಗಳು ಮನುಷ್ಯನ ಒಳಿತಿಗಾಗಿಯೇ ಇರಬೇಕು' ಆತನ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಿ ಅಲ್ಲಿನ ದೃಶ್ಯಗಳನ್ನು ಕಣ್ತುಂಬಿಸಿಕೊಳ್ಳುತ್ತಾ 'ತಂದೆಯ ಪ್ರಭಾವ ಬಹಳವಾಗಿಯೇ ಆದಂತೆ ಕಾಣ್ತಿದೆ' ಹೇಳಿದ್ದೆ ನಾನು. ನಿಜಕ್ಕೂ ಮಗನ ಮೇಲೆ ತಂದೆಯ ಪ್ರಭಾವ ಬಲವಾಗಿಯೇ ಆಗಿರುವುದು ಸ್ಪಷ್ಟವಾಗಿ ಗೋಚರಿಸಿತ್ತು. 'ಎರಡು ಮಾತಿಲ್ಲ ಅದರಲ್ಲಿ. ನಾನು ಅಪ್ಪನನ್ನು ನೋಡಿಯೇ ಲಾ ಓದಿ ವಕೀಲ ವೃತ್ತಿ ಆಯ್ಕೆ ಮಾಡಿಕೊಂಡಿದ್ದು. ಅಪ್ಪನನ್ನು ಕಂಡರೆ ಈ ಪ್ರಾಂತ್ಯದಲ್ಲಿ ಪೊಲೀಸರು ಭಯಪಡುತ್ತಾರೆ. ಈ ಮೂವತ್ತೈದು ವರ್ಷಗಳಲ್ಲಿ ಅಪ್ಪನಿಂದಾಗಿ ಹನ್ನೆರಡು ಮಂದಿ ಪೊಲೀಸ್ ಆಫೀಸರ್ ಗಳು ಸೇವೆಯಿಂದ ಅಮಾನತುಗೊಂಡು ಶಿಕ್ಷೆ ಅನುಭವಿಸಿದ್ದರೆ ಮೂವರು ಪೊಲೀಸರು ಸೇವೆಯಿಂದಲೇ ವಜಾಗೊಂಡಿದ್ದರೆ. ಅಪ್ಪ ತಾನು ಕೈಗೆತ್ತಿಕೊಂಡ ಯಾವ ಕೇಸಲ್ಲೂ ಸೋಲು ಕಂಡವನಲ್ಲ. ಈ ಮೂರು ವರ್ಷಗಳಿಂದ ವಕೀಲಿಯನ್ನು ಬಿಟ್ಟಿದ್ದಾರೆ. ಅಪ್ಪನ ಎಲ್ಲಾ ಕೇಸುಗಳನ್ನು ನಾನೇ ನಡೆಸುತ್ತಿದ್ದೇನೆ. ಯಾವುದಾದರೂ ಕ್ಲಿಷ್ಟಕರವಾದ ಕೇಸುಗಳಿದ್ದರೆ ಅಪ್ಪನೇ ಪಾಯಿಂಟುಗಳನ್ನು ಹಾಕಿಕೊಡುತ್ತಾರೆ. ನನ್ನ ಹದಿನೈದು ವರ್ಷಗಳ ವಕೀಲ ವೃತ್ತಿಯಲ್ಲಿ ಎರಡೇ ಎರಡು ಕೇಸುಗಳನ್ನು ಮಾತ್ರ ಸೋತಿದ್ದೇನೆ. ಎಲ್ಲಾ ಕ್ರೆಡಿಟ್ಟೂ ಅಪ್ಪನಿಗೆ ಸಲ್ಲುತ್ತದೆ. ಅಂದ ಹಾಗೆ ಯಾವೊತ್ತು ಅಧರ್ಮದ ಕೇಸುಗಳನ್ನು ಅಪ್ಪ ಕೈಗೆತ್ತಿಕೊಂಡವನೇ ಅಲ್ಲ. ಮತ್ತು ನಾನೂ ಕೂಡಾ' ನಾರಾಯಣ ಹೆಗಡೆಯ ಮಾತುಗಳನ್ನು ಕೇಳಿ ಜಿವಿ ಹೆಗಡೆಯ ಮೇಲೆ ಮತ್ತಷ್ಟು ಅಭಿಮಾನ ಮೂಡಿತ್ತು. ನಾರಾಯಣ ಹೆಗಡೆ ತದಡಿಯಿಂದ ಕಾರು ಅರೆಂಜ್ ಮಾಡಿ ಗೋಕರ್ಣಕ್ಕೆ ಕರೆದುಕೊಂಡು ಹೋಗಿದ್ದ. ಬಹಳ ಹಿಂದೆ ಯಾವಾಗಲೋ ಒಮ್ಮೆ ಗೋಕರ್ಣ ನೋಡಿದ್ದಿದ್ದು ನಾನು. ಗೋಕರ್ಣನಾಥೇಶ್ವರನ ದರ್ಶನ ಮಾಡಿ ಸಮುದ್ರ ತೀರದಲ್ಲಿ ಒಂದ್ಹತ್ತು ನಿಮಿಷ ಇದ್ದು ಕಾರಿನಲ್ಲಿ ಕುಳಿತಾಗ 'ನಿಮಗೆ ಬೇಸರವಿಲ್ಲವೆಂದರೆ ನನ್ನ ಹೆಂಡತಿಯ ಊರು ಹನೇಹಳ್ಳಿ ಇಲ್ಲಿಗೆ ಹತ್ತಿರ. ಹೇಗೂ ಬಂದಿದ್ದೇವೆ, ಒಂದ್ಹೈದು ನಿಮಿಷ ನೋಡಿಕೊಂಡು ಹೋಗೋಣವಾ' ಎಂದಿದ್ದ. 'ಛೇ ನನಗೆಂಥ ಬೇಸರ, ಆಗಬಹುದು' ಎಂದಿದ್ದೆ. ಕಾರು